1.ಬಾರೆ ಭಾಗ್ಯದ ನಿಧಿಯೇ ಕರವೀರ

ನಿವಾಸಿನಿ ಸಿರಿಯೆ ||

ಬಾರೆ ಬಾರೆ ಕರವೀರ ನಿವಾಸಿನಿ
ಬಾರಿಬಾರಿಗು ಶುಭ

ತೋರು ನಮ್ಮ ಮನಗೆ ||

ಲೋಕಮಾತೆಯು ನೀನು ನಿನ್ನ
ತೋಕನಲ್ಲವೆ ನಾನು

ಆಕಳು ಕರುವಿನ ಸ್ವೀಕರಿಸುವಪರಿ

ನೀ ಕರುಣದಿ ಕಾಲ್ಹಾಕು ನಮ್ಮ
ಮನಗೆ||1||

ನಿಗಮ ವೇದ್ಯಳೆ ನಿನ್ನ ನಾ
ಪೊಗಳಲಾಪೆನಲ್ಲ

ಮಗನಪ ರಾಧವ ತೆಗೆದೆಣೆಸದಲೆ ಲಗು

ಬಗೆಯಿಂದಲಿ ಪನ್ನಗವೇಣಿ||2||

ಕಡೆಗೆ ನಮ್ಮನೆ ವಾಸ ಒಡೆಯ
'ಅನಂತಾದ್ರೀಶ'

ಒಡೆಯನಿದ್ದಲ್ಲಿಗೆ ಮಡದಿಯು ಬಾಹೊದು

ರೂಢಿಗುಚಿತವಿದು ನಡೆ ನಮ್ಮ ಮನೆಗೆ
||3||

2.ರಾಮನಾಮ ಭಜಿಸಿದವಗೆ ಉಂಟೆ ಭವದ
ಬಂಧನ || ಪ ||

ಕಾಮಹರನ ಸತಿಯು ಸದಾ ನೇಮದಿಂದ
ಭಜಿಸುವ || ಅ.ಪ ||

ಶಿವನು ಧನ್ಯನಾದ ಮೌನಿ ಯುವತಿ
ಪಾವನೆಯಾದಳು

ರವಿಯ ಸುತನು ಪದವಿ ಪಡೆದ, ಧ್ರುವನು
ದಿವಿಜನೆನಿಸಿದ || ೧ ||

ಕರಿವರ ಪ್ರಹ್ಲಾದ ದ್ರೌಪದಿ
ವರವಿಭೀಷಣರೆಲ್ಲರೂ

ಹರಿಯ ಸ್ಮರಣೆ ಮಾಡಿ ಸುಖ
ಭರಿತರಾಗಲಿಲ್ಲವೇ || ೨ ||

ಗಿರಿಜೆ ರಾಮ ಮಂತ್ರದಿಂದ ಪರಮ
ಮಂಗಳೆಯಾದಳು

ವರದ ಗೋಪಾಲ ವಿಠಲ ನಾಮ
ದುರಿತಕಾನನ ಪಾವಕ || ೩ ||

3.ಬಂದೆವಯ್ಯಾ ಗೋವಿಂದಶೆಟ್ಟಿ!

ಇಂದು ನಿಮ್ಮ ಹರಿವಾಣ
ಪ್ರಸಾದವುಂಟೆನಲಾಗಿ|| ಬಂದೆವಯ್ಯ
ಗೋವಿಂದ ಶೆಟ್ಟಿ ||

ಅಪ್ಪಾಲು ಅತಿರಸ ತುಪ್ಪ ಕಜ್ಜಾಯವು
ಒಪ್ಪುವ ಯಾಲಕ್ಕಿ ಶುಂಠಿ ಮೆಣಸು

ಅಪರೂಪವಾದ ಕಜ್ಜಾಯ ರಾಶಿಗಳ
ಛಪ್ಪನ್ನದೇಶಕ್ಕೆ ಮಾರುವ ಶೆಟ್ಟಿ
||ಬಂದೆವಯ್ಯ ಗೋವಿಂದಶೆಟ್ಟಿ||

ಒಡೆದ ಮಡಕೆಯೆನ್ನು ಬಿಡದೆ ನಾಮವ
ಮಾಡಿಕೊಡುವೆ ನೀ ಕಾಸಿಗೆ ಒಂದೊಂದನು

ಒಡಲು ತುಂಬಿ ಮಿಕ್ಕ ಅನ್ನವ ಮಾರಿಸಿ
ಒಡವೆಯ ಗಳಿಸುವ ಕಡುಲೋಭಿ ಶೆಟ್ಟಿ
||ಬಂದೆವಯ್ಯ ಗೋವಿಂದಶೆಟ್ಟಿ||

ಶೇಷಗಿರಿಯಮೇಲೆ ಇಪ್ಪ ತಿಮ್ಮಶೆಟ್ಟಿ
ದೇಶಕಕೆ ಪ್ರಸಾದವ ನಡೆಸುವ ಶೆಟ್ಟಿ

ಆಶೆಯಿಂದ ಹಣಕಾಸು ಗಳಿಸುವ
ಆದಿಕೇಶವ ನಾರಾಯಣನೆಂಬ ಶೆಟ್ಟಿ
||ಬಂದೆವಯ್ಯ ಗೋವಿಂದಶೆಟ್ಟಿ ||

4.ಬಾ ಬಾ ಭಕುತರ ಹೃದಯ ಮಂದಿರ

ಬಾ ಬಾ ಜಗದೋದ್ಧಾರ ||pa||

ಬಾ ಬಾ ವೇಂಕಟಾಚಲ ವಿಹಾರ

ಬಾ ಬಾನೇಕಾವತಾರ ಧೀರ-ಶೂರ||a.pa||

ದಕ್ಷ ಕಮಲಾಕ್ಷ ರಾಕ್ಷಸ ಕುಲ ಶಿಕ್ಷ

ಲಕ್ಷ್ಮಣನಗ್ರಜ ಲಕ್ಷ್ಮೀವಕ್ಷ

ಪಕ್ಷಿವಾಹನ ಪೂರ್ಣಲಕ್ಷಣ ಸರ್ವೇಶ

ಮೋಕ್ಷದಾಯಕ ಪಾಂಡವ ಪಕ್ಷ

ಅಕ್ಷಯವಂತ ಸೂಕ್ಷ್ಮಾಂಬರ ಧರಾ-

ಧ್ಯಕ್ಷ ಪ್ರತ್ಯಕ್ಷದ ದೈವ

ಅಕ್ಷತನಾರೇರ ತಕ್ಷಣದಲಿ ತಂದ

ಅಕ್ಷರ ಪುರುಷ ಗೋವಿಂದ ||1||

ತಾಳ ಜಾಗಟೆ ಮದ್ದಳೆ ದುಂದುಭಿ ಭೇರಿ

ಕಾಳೆ ಹೆಗ್ಗಾಳೆ ತಮ್ಮಟೆ ನಿ-

ಸ್ಸಾಳೆ ಪಟಹ ತಂಬೂರಿ ಪಣವ ಕಂಸಾಳೆ

ಕಂಬುಡಿಕ್ಕಿ ವಾದ್ಯ

ಸೂಳೈಸುತಲಿರೆ ಭಾಗವತರು ಸಂ

ಮೇಳದಿ ಕುಣಿದೊಲಿದಾಡೆ

ಸಾಲುಪಂಜಿನ ಗುಂಜಿ ಛತ್ರ ಚಾಮರ ಧ್ವಜ

ಢಾಲುಗಳು ಒಪ್ಪಿರಲು||3||

ಬಂಗಾರ ರಥದೊಳು ಶೃಂಗಾರವಾದ ಶ್ರೀ

ಮಂಗಳಾಂಗ ಕಳಿಂಗ

ಭಂಗ ನರಸಿಂಗÀ ಅಂಗಜ ಜನಕ ಸಾ-

ರಂಗ ರಥಾಂಗ ಪಾಣಿ

ಸಂಗ ನಿಸ್ಸಂಗ ಮಾತಂಗ ವಿಹಂಗ ಪ್ಲ-

ವಂಗ ನಾಯಕ ಪರಿಪಾಲ

ಸಂಗೀತ ಲೋಲ ಗೋಪಾಂಗನೆಯರ ಅಂತ-

ರಂಗ ಸಂತಾಪ ವಿದೂರ ||7||

ಹತ್ತವತಾರದ ಹರಿಯೆ ಘನಸಿರಿಯೆ

ಮತ್ತೊಬ್ಬರನು ಹೀಗೆ ಕರೆಯೆ

ಭೃತ್ಯರ ಸಂಗಡೋಡ್ಯಾಡುವ ದೊರೆಯೆ ಎ-

ನ್ನಿತ್ತಿಲಿ ಆಡುವ ಮರಿಯೆ

ಚಿತ್ತದೊಲ್ಲಭ ನಮ್ಮ ವಿಜಯವಿಠ್ಠಲರೇಯ

ಎತ್ತನೋಡಲು ನಿನಗೆ ಸರಿಯೆ

ಅತ್ತಿತ್ತ ಪೋಗದೆ ಇತ್ತ ಬಾರೈಯ ಎ-

ನ್ನಿತ್ತಿಲಿ ವೆಂಕಟದೊರೆಯ ||9||

5.ಶಿವನೇ ನಾ ನಿನ್ನ ಸೇವಕನಯ್ಯಾ

ಕರುಣದಿ ಪಿಡಿ ಕೈಯ್ಯಾ ಶಿರಿಧರನರಮಯ್ಯ || ಪ ||

ಭವಮೋಚಕ ಭಾಗವತಶಾಸ್ತ್ರವನು

ಅವನೀಶಗೆ ಪೇಳ್ದವ ನೀನಲ್ಲವೆ || ಅ.ಪ ||

ವೈಕಾರಿಕ ತೈಜಸ ತಾಮಸವೆಂಬ ತ್ರೈತತ್ತ್ವಗಳೆಂಬ

ಸಾಕಾರಿ ಶಾರ್ವರಿಧವಧರ ಸಾಂಬ ಸುರಪಾದ್ಯರ ಬಿಂಬ

ವೈಕಲ್ಯಾಸ್ಪದವ ಕಳೆದೊಮ್ಮಿಗೆ

ವೈಕುಂಠಕೆ ಕರೆದೊಯ್ಯೊ ಕರಿಗೊರಳಾ || ೧ ||

ಮೃತ್ಯುಂಜಯ ಮುಪ್ಪುರಹರ ಮಹದೇವ ದೇವರ್ಕಳಕಾವ

ಸ್ತುತ್ಯಾದ್ರಿಜ ದಿತಿಜತತೀವನದಾವಾ ದುರಿತಾಂಬುಧಿನಾವ

ಕೃತ್ತಿವಾಸ ಎನ್ನತ್ಯಪರಾಧಗ

ಳೆತ್ತಿಣಿಸದೆ ಕೃತಕೃತ್ಯನ ಮಾಡೈ || ೨ ||

ಗಂಗಾಧರ ಷಣ್ಮುಖಗಣಪರ ತಾತ ತ್ರೈಲೋಕ್ಯತ್ರಾತ

ಲಿಂಗಾಹ್ವಯ ತಾರಕಹರ ನಿರ್ಭೀತ ಭುವನಾಧಿನಾಥ

ತುಂಗಮಹಿಮ ನಿಸ್ಸಂಗ ಹರಿಯ ದ್ವಿತಿ

ಯಂಗ ಡಮರು ಶೂಲಂಗಳ ಪಿಡಿದಿಹ || ೩ ||

ಪಂಚಾನನ ಪನ್ನಗಭೂಷಣ ಭೀಮ ಭುವನಾಭಿರಾಮ

ಸಂಚಿಂತನಮಾಡುವ ಸಂತತನೇಮ ಶ್ರೀರಾಮನಾಮ

ಪಂಚಶರಾರಿ ವಿರಿಂಚಿಕುವರ ನಿ

ಷ್ಕಿಂಚನರೊಡೆಯನ ಮಂಚಪದಾರ್ಹನೆ || ೪ ||

ಸ್ಪಟಿಕಾಭ ಕಪಾಲಿ ಕಾಮಿತಫಲದಾ ಫಲ್ಗುಣಸಖ ಶ್ರೀದ

ವಿಠಲ ವಿತ್ತಪಮಿತ್ರ ದ್ವಿರದ ಚರ್ಮಾಂಬರನಾದ

ಕುಟಿಲರಹಿತ ಧೂರ್ಜಟಿ ವೃಷಭಧ್ವಜ

ನಿಟಿಲನಯನ ಸಂಕಟವ ನಿವಾರಿಸೊ || ೫ ||

6.ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ || PA ||

ಪರಿಪರಿಶಾಸ್ತ್ರವನೇಕವನೋದಿ

ವ್ಯರ್ಥವಾಯಿತು ಭಕುತಿ || A PA ||

ಆರು ಶಾಸ್ತ್ರವನೋದಿದರಿಲ್ಲ ಮೂ

ರಾರು ಪುರಾಣವ ಮುಗಿಸಿದರಿಲ್ಲ

ಸಾರಿ ಸಜ್ಜನರ ಸಂಗವ ಮಾಡದೆ

ಧೀರನಾಗಿ ತಾ ಮೆರೆದರೆ ಇಲ್ಲ || 1 ||

ಕೊರಳೊಳು ಮಾಲೆಯ ಧರಿಸಿದರಿಲ್ಲ

ಬೆರಳು ಜಪಮಣಿ ಎಣಿಸಿದರಿಲ್ಲ

ಮರುಳನಂತೆ ಶರೀರಕೆ ಬೂದಿಯ

ಒರಸಿಕೊಂಡು ತಾ ತಿರುಗಿದರಿಲ್ಲ || 2 ||

ನಾರಿಯ ಭೋಗ ಅಳಿಸಿದರಿಲ್ಲ

ಶರೀರಕೆ ಸುಖವ ಬಿಡಿಸಿದರಿಲ್ಲ

ನಾರದ ವರದ ಶ್ರೀ ಪುರಂದರವಿಠಲನ

ಮರೆಯದೆ ಮನದೊಳು ಬೆರೆಯುವ ತನಕ || 3 ||

7.ಗೋಪಿ ಬಾಲನೆ
ಬಹುಗುಣಶೀಲನೆಗೋವಳಪಾಲನೆ
ನೋಡುವೆ ಬಾ ಬಾ ಬಾ ಪ

ಗೋಪ ರೂಪನೆ ಪಾಪ
ದೂರನೆನೀಪದೊಳು ಕುಳಿತು ಗೋಪೇರ
ವಸ್ತ್ರವಶ್ರೀಪತಿ ನೀಡಿದಿ ಬಾ ಬಾ ಬಾ 1

ಸಿಂಧು ಮಂದಿರ
ಸುಂದರಾಂಬರಮಂದಹಾಸವ ಮಾಡಿ
ವಂದಾರುಗಳ ಮಾಡಿಆನಂದದಿ
ನೋಡುವೆ ಬಾ ಬಾ ಬಾ 2

ದೋಷದೂರನೆ
ವಾಸುದೇವನೆಶೇಷಗಿರಿಯಲಿ ನಿಂತು ದಾಸ
ಜನರಿಗೆಲ್ಲಇಂದಿರೇಶನೆ ಕಾಯುವಿ ಬಾ ಬಾ
ಬಾ3

8.ರಚನೆ: ಶ್ರೀ ವಿಜಯದಾಸರು

ರಾಮ ರಾಮ ಎಂಬೆರಡಕ್ಷರ|

ಪ್ರೇಮದಿ ಸಲಹಿತು ಸುಜನರನು||ಪ||

ಹಾಲಹಲವನು ಪಾನವ ಮಾಡಿದ

ಪಾಲಲೊಚನನೆ ಬಲ್ಲವನು|

ಆಲಾಪಿಸುತಾ ಶಿಲೆಯಾಗಿದ್ದ

ಬಾಲೆ ಅಹಲ್ಯೆಯ ಕೇಳೆನು||೧||ಪ||

ಅಂಜಿಕೆ ಇಲ್ಲದೆ ಗಿರಿ ಸಾರಿದ ಕಪಿ

ಕುಂಜರ ರವಿಸುತ ಬಲ್ಲವನು|

ಎಂಜಲ ಫಲಗಳ ಹರಿಗರ್ಪಿಸಿದ

ಕಂಜಲೋಚನೆಯ ಕೇಳೆನು||೨||ಪ||

ಕಾಲವನರಿತು ಸೇವೆಯಮಾಡಿದ

ಲೋಲ ಲಕ್ಷ್ಮಣನೆ ಬಲ್ಲವನು|

ವ್ಯಾಳಶ್ಯನ ಶ್ರೀ ವಿಜಯವಿಟ್ಟಲನ

ಲೀಲೆಶರದಿಯ ಕೇಳೆನು||೩||ಪ||

9.ಓಡಿ ಓಡಿ ಬಂದು ಹಣೆಗೆ ನೀಡಿ ನೀನೆ
ಡಿಡಿಕ್ಕ್ ಡಿಡಿಕ್ಕ್ ಡಿಡಿಕ್ಕ್ ಡಿಡಿಕ್ಕ್ ಎಂದು

ಡಿ ಡೀ ಆಡ್ಯಾನೆ ರಂಗಾ ಡಿ ಡೀ ಆಡ್ಯಾನೆ. || A. PA ||

ಮರಕದ ನವರತ್ನ ವಜ್ರ ಹರಳು ಕೆತ್ತಿಸಿದಾ
ಜುಮನಿ ಕಿರಣ ಮುಕುಟ ಧರಿಸಿದ ಶಿರದಲ್ಲೀ

ಸರಿ ಸರಿ ಸರಿ ಸರಿ ಸರಿ ಸರಿದಾಡುತ. ಡಿ ಡೀ
ಆಡ್ಯಾನೆ ರಂಗಾ ಡಿ ಡೀ ಆಡ್ಯಾನೆ || 1 ||

ಚಂದ್ರಶೇಖರ ಹಂಸ ವಾಹನ ಇಂದ್ರಾದ್ಯರ
ಆಕಾಶದಲ್ಲಿ ಧುಂ ಧುಂ ಧುಂ ಧುಂ
ಧುಂಧುಬಿ ನುಡಿಸೇ

ಬಂದೇ ಇಕೋ ಬಂದೆ ಬಂದೆನುತಾ ಡಿ ಡೀ
ಆಡ್ಯಾನೆ ರಂಗಾ ಡಿ ಡೀ ಆಡ್ಯಾ ನೆ || 2 ||

ಹಿಂತಿರುಗಿ ಪೋಗಿ ನೀನು ಅಂತರಿಸಿ
ದೂರದಲ್ಲಿ ನಿಂತು ವಿಜಯ ವಿಠ್ಠಲ
ರಾಯನೂ

ವಿಠ್ಠಲ ರಾಯನು ನಿಂತಿರಿರಿರಿರಿರಿರೀ
ಎಂದು ಡಿ ಡೀ ಆಡ್ಯಾನೆ ರಂಗಾ ಡಿ ಡೀ
ಆಡ್ಯಾ ನೆ|| 3 ||

10. ಕರ್ತಾ ಕೃಷ್ಣಯ್ಯ ನೀ ಬಾರಯ್ಯ ।
ಎನ್ನಾರ್ತದನಿಗೊಲಿದು ಬಾರಯ್ಯ ॥

ಸುಗುಣದಖಣಿಯೆ ನೀ ಬಾರಯ್ಯ ।
ಎಮ್ಮಘವ ನೋಡಿಸಲು ನೀ ಬಾರಯ್ಯ ।
ಧಗೆಯೇರಿತು ತಾಪ ಬಾರಯ್ಯ ಸದಾ ।
ಮುಗುಳ್ನಗೆ ಮಳೆಗೆರೆಯೆ ಬಾರಯ್ಯ ॥ ೧॥

ವೈರಿವರ್ಗದಿ ನೊಂದೆ ಬಾರಯ್ಯ ।
ಮತ್ಯಾರೂ ಗೆಳೆಯರಿಲ್ಲ ಬಾರಯ್ಯ ।
ಸೇರಿದೆ ನಿನ್ನಯ ಕರುಣೆಗೆ ಬಾರಯ್ಯ ।
ಒಳ್ಳೆ ದಾರಿಯ ತೋರಲು ಬಾರಯ್ಯ ॥ ೨॥

ವೈರಾಗ್ಯಭಾಗ್ಯವ ಕೊಡಬಾರಯ್ಯ ।
ನಾನಾರೋಗದ ಭೇಷಜ ಬಾರಯ್ಯ ।
ಜಾರುತದಾಯು ಬೇಗ ಬಾರಯ್ಯ ।
ಉದಾರ ಪ್ರಸನ್ನವೆಂಕಟ ಬಾರಯ್ಯ ॥ ೩॥

11.ಶಂಭೋ ಸ್ವಯಂಭು ಸಂಭವ-ನಂಬಿದೆ ಕಾಯೊ
ಜಂಭಾರಿಸುತ ಅಭವ
ಅಂಬರ ಪುರಹರ ಸಾಂಬ ತ್ರಿಯಂಬಕ
ಶಂಬಕಾರಿ ರಿಪುಗಂಭೀರ ಕರುಣಿ

ಭಸಿತ ಭೂಷಿತ ಶರೀರ-ಭಕ್ತರುದ್ಧಾರ
ವಿಷಕಂಠ ದುರಿತಹರ
ಪಶುಪತಿ ಫಣಿಹಾರ-ಪಾವನಕಾರ
ತ್ರಿಶೂಲ ಡಮರುಗಧರ
ನೊಸಲನಯನ ವಿಕಸಿತಾಂಬುಜ ಮುಖ
ಶಶಿಧರ ಮತ್ತರಕ್ಕಸ ಮದ ಮರ್ದನ
ಘಸಣೆಗೊಳಿಪ ತಾಮಸವ ಕಳೆದು ಮಾ-
ನಸದಲಿ ರಂಗನ ಬಿಸಜ ಪಾದವ ತೋರೊ ||1||

ರಜತ ಪರ್ವತ ನಿವಾಸ ನಿರ್ಮಲ ಭಾಸ
ಗಜವೈದ್ಯನಾಶ ಗಿರೀಶ
ಸುಜನರ ಮನೋವಿಲಾಸ ವ್ಯೋಮಕೇಶ
ತ್ರಿಜಗದಲ್ಲಣ ಗೌರೀಶ
ಅಜಸುತನಧ್ವರ ಭಜನೆಯ ಕೆಡಸಿದೆ
ಅಜಗರ ಮಂದಿ ಗಜಮುಖ ಜನಕನೆ
ಗಜಗಮನ ಮುನಿ ತನುಜನ ಕಾಯ್ದನೆ
ವಜ್ರಮುನಿ ವಂದಿತ ಭಜಿಸುವೆ ನಿನ್ನ ||2||

ಮಧರಾಪುರಿ ನಿಲಯ ಮೃತ್ಯುಂಜಯ
ಸದಮಲ ಸುಮನಗೇಯ
ಸದಾ ನಮಿಪರ ಹೃದಯದೊಳಗುಳ್ಳ ಭಯ-
ಸದೆಯುತ್ತ ಕೊಡು ಅಭಯ
ಸದಾಶಿವ ಜಾಹ್ನವಿ ಧರಕೃತ ಮಾರಾ
ನದೀತೀರದಿ ವಾಸವಾಗಿಪ್ಪ ಸೌಂದರ್ಯ
ಮಧುಪುರಿ ವಿಜಯವಿಠ್ಠಲನ ಪದಾಬ್ಜಕೆ
ಮಧುಪನೆನಿಪ ಪಂಚವದನ ಕೈಲಾಸ ||3||

12. ರಾಯ ಬಾರೋ – ತಂದೆ ತಾಯಿ ಬಾರೋ ನಮ್ಮ ಕಾಯಿ ಬಾರೋ
ಮಾಯಿಗಳ ಮರ್ಧಿಸಿದ ರಾಘವೇಂದ್ರ ರಾಯ ಬಾರೋ || ಪ ||

ವಂದಿಪ ಜನರಿಗೆ ಮಂದಾರ ತರುವಂತೆ

ಕುಂದದಭೀಷ್ಟವ ಸಲಿಸುತಿಪ್ಪ – ರಾಯ ಬಾರೋ

ಕುಂದದಬೀಷ್ಟವ ಸಲಿಸುತಿಪ್ಪ ಸರ್ವಜ್ಞ

ಮಂದನ್ನ ಮತಿಗೆ ರಾಘವೇಂದ್ರ – ರಾಯ ಬಾರೋ || ೧ ||

ಆರುಮೂರು ಎಳು ನಾಲ್ಕು ಎಂಟು ಗ್ರಂಥ ಸಾರಾರ್ಥ

ತೋರಿದಿ ಸರ್ವರಿಗೆ ನ್ಯಾಯದಿಂದ – ರಾಯ ಬಾರೋ

ತೋರಿದಿ ಸರ್ವರಿಗೆ ನ್ಯಾಯದಿಂದ ಸರ್ವಜ್ಞ

ಸೂರಿಗಳರಸನೆ ರಾಘವೇಂದ್ರ – ರಾಯ ಬಾರೋ || ೨ ||

ರಾಮಪದಸರಸೀರುಹ ಭೃಂಗ ಕೃಪಾಪಾಂಗ

ಭ್ರಾಮಕ ಜನರ ಮತಭಂಗ – ರಾಯ ಬಾರೋ

ಭ್ರಾಮಕ ಜನರ ಮತಭಂಗ ಮಾಡಿದ

ದೀಮಂತರೊಡೆಯನೆ ರಾಘವೇಂದ್ರ – ರಾಯ ಬಾರೋ || ೩ ||

ಭಾಸುರಚರಿತನೆ ಭೂಸುರವಂದ್ಯನೆ

ಶ್ರೀ ಸುಧೀಂದ್ರಾರ್ಯರ ವರಪುತ್ರ – ರಾಯ ಬಾರೋ

ಶ್ರೀ ಸುಧೀಂದ್ರಾರ್ಯರ ವರಪುತ್ರನೆನಿಸಿದ

ದೈಶಿಕರೊಡೆಯನೆ ರಾಘವೇಂದ್ರ – ರಾಯ ಬಾರೋ || ೪ ||

ಭೂತಳನಾಥನ ಭೀತಿಯ ಬಿಡಿಸಿದ

ಪ್ರೇತತ್ವ ಕಳೆದಿ ಮಹಿಷಿಯ – ರಾಯ ಬಾರೋ

ಪ್ರೇತತ್ವ ಕಳೆದಿ ಮಹಿಷಿಯ ಮಹಮಹಿಮ

ಜಗನ್ನಾಥ ವಿಠ್ಠಲನ ಪ್ರೀತಿಪಾತ್ರ – ರಾಯ ಬಾರೋ || ೫ ||

13. ಗುರುವೇ ವರಹಜ ತಟ ವಾಸ ಪುರಿ ಮಂತ್ರದೀಶ || Pa ||

ಅರುಮೊರೆ ಇಡುವೆನೋ ವರಪದ ಪದುಮಕೆ

ಕರುಣದಲ್ಲೀನ ಮನ ಹರಿಯಲ್ಲಿ ಇರಿಸೋ || A. PA||

ಭಾಗಿ ಭಜಿಪೇ ಗುರುವೇ ಎನ್ನಯ ರೋಗ ಹರಿಸು ಪ್ರಭುವೇ

ರಾಘವೇಂದ್ರ ಧುರಿ ತೌಧವಿ ಧೂರನೇ

ಭೋಗಿ ಶಯನ ಪಾದ ರಾಗಧಿ ಭಜಿಸುವ || 1 ||

ಭೂತ ಪ್ರೇತ ಭಾಧೆ ಬಿಡಿಸುವ ಛಾತಿ ನಿಮ್ಮದು ತಿಳಿದೇ

ಭೂತರೆನಿಪ ಜನ ಆತು ನಿಮ್ಮಪದ

ಪ್ರೀತಿ ಸೇವೆಯಲ್ಲಿ ತಾತುರರಿಹರೋ || 2 ||

ಮೌನಿವರ್ಯ ನಿನ್ನಾ ಬೇಡುವೆ ಜ್ಞಾನ ಭಕುತಿಯನ್ನಾ

ಧ್ಯಾನ ಮಾಡಿ ಅಜ್ಞ್ಯನವನೋಡಿಸೆ

ಹೀನ ಯೋನಿ ಬರಲೇನು ಅಂಜೇನೋ || 3 ||

ಪರಿಮಳಾರ್ಯರ್ ಎಂದು ನಿಮ್ಮಯ

ಬಿರುದು ಕೇಳಿ ಬಂದು

ಮೊರಯನಿಡುವೇ ತವ ಚರಣಂ ಬುರುಹಕೆ

ಅರವನೀಯೋ ತವ ಪರಿಮಳ ಸ್ವಭಗನು || 4 ||

ಗುರು ಸುಧೀಂದ್ರ ಕರಜ ತೋರ್ಪುದು

ಹರಿಯ ಪಾದ ವಿಸಜಾ

ವರ ಸುಹೃಧ್ಗ ಗುರು ಗೋವಿಂದ ವಿಠಲನ

ಚರಣ ಸರೋಜವ ನಿರುತ ಭಜಿಪ ಗುರು || 5 ||

14. ಭೋ ಯತಿ ವರದೇಂದ್ರ – ಶ್ರೀಗುರುರಾಯ ರಾಘವೇಂದ್ರ || ಪ ||

ಕಾಯೋ ಎನ್ನ ಶುಭಕಾಯ ಭಜಿಸುವೆನು – ಕಾಯೋ ಮಾಯತಮಕೆ ಚಂದ್ರಾ || ಅ ||

ಕಂಡ ಕಂಡ ಕಡೆಗೆ ತಿರುಗಿ – ಬೆಂಡಾದೆನೋ ಕೊನೆಗೆ

ಕಂಡ ಕಂಡವರ ಕೊಂಡಾಡುತ ನಿಮ್ಮ – ಕಂಡೆ ಕಟ್ಟ ಕಡೆಗೆ || ೧ ||

ನೇಮವು ಎನಗೆಲ್ಲೀ ಇರುವುದು – ಕಾಮಾಧಮನಲ್ಲಿ

ಭೋ ಮಹಾಮಹಿಮನೆ ಪಾಮರ ನಾ – ನಿಮ್ಮ ನಾಮವೊಂದೆ ಬಲ್ಲೆ || ೨ ||

ಮಂತ್ರವ ನಾನರಿಯೇ – ಶ್ರೀಮನ್ಮಂತ್ರಾಲಯ ಧೊರೆಯೆ

ಅಂತರಂಗದೊಳು ನಿಂತು ಪ್ರೇರಿಸುವ – ಅನಂತಾದ್ರೀಶ ನಾನರಿಯೆ || ೩ ||

15. ರಥವ ನೇರಿದ ಚಂದ್ರಾ ಶ್ರೀ ರಾಘವೇಂದ್ರಾ

ಆಡಿ ಪಾಡಿ ಕುಣಿದಾಡಿ ಭಜನೆಮಾಡು |

ಬೇಡಿದ ವರ ಕೊಡುವಾ ಬೇಡಿದ ವರ ಕೊಡುವಾ| ಅ.ಪ.|

ಕಂಬದಿ ನರಹರಿಯ ಬರಿಸಿದ ಕಂದಾ

ಕುಂಬಿಣಿಪತಿ ಕುಹಯೋಗವ ಕಳೆದಾ

ನಂಬಿದವರ ಪೊರೆವಾ ನಂಬಿದವರ ಪೊರೆವಾ | ೧ |

ಆದ್ಯ ಸತ್ಯಾಗ್ರಹಿ ವರ ಚಿಂತಾಮಣಿ

ಉದ್ ಗ್ರಂಥಗಳನು ರಚಿಸಿದ ದಿನಮಣಿ

ಮಧ್ವಮತೋದ್ದಾರಾ ಮಧ್ವಮತೋದ್ದಾರಾ | ೨ |

ಭೂಪತಿ ವಿಠಲನ ಪ್ರೀತಿ ವಿಖ್ಯಾತಾ

ಆಪದ್ಬಾಂಧವ ಅನಾಥ ನಾಥಾ

ರಥೋತ್ಸವದಿ ಮೆರೆವಾ ರಥೋತ್ಸವದಿ ಮೆರೆವಾ | ೩

**16. 1. ಮುದ್ದು ರಾಮರ ಬಂಟ**

**ಬುದ್ದಿಯುಳ್ಳ ಹನುಮಂತ**

**ಹದ್ದಾಗಿ ಹಾರಿದನೆ ಆಕಾಶಕೆ || PA ||**

**ನಿದ್ರೆ ಗೈವ ಸಮಯದಿ ಎದ್ದು ಬಾರೆಂದರೆ ಅ-**

**ಲ್ಲಿದ್ದ ರಕ್ಕಸರನೆಲ್ಲಾ ಗೆಲಿದಾತನೆ || A PA ||**

**ದಾರಿ ದೂರವೆಂದು ದಾರಿಯನೆ ನಿರ್ಮಿಸಿದ**

**ಧೀರ, ರಾಮರ ಬಂಟ ಹನುಮಂತನೆ | ನೋಡಿ-**

**ಬಾರೆಂದರೆ ಪೋಗಿ ಲಂಕೆಯ ಸುಟ್ಟು**

**ಬೇಗದಲಿ ಮರವನೇರಿ ಕುಳಿತಾತನೆ || 1 ||**

**ಅಶೋಕ ವನದಲ್ಲಿ ಸೀತೆಯನು ನೋಡಿದ**

**ಶ್ರೀರಾಮರ ಬಂಟ ಹನುಮಂತನೆ |**

**ಮಾತೆಯನು ಮಾತಾಡಿಸಿ ಕ್ಷೇಮ ಸುದ್ದಿ**

**ತಿಳಿಸಿದ ರಘುವೀರ ದೂತ ಜಾಣ ನಿವನೆ || 2 ||**

**ಆತನ ಮಾತಿಗೆ ಸೇತುವೆನೆ ಕಟ್ಟಿಸಿದ**

**ಸೀತಾರಾಮರ ಬಂಟ ಹನುಮಂತನೆ |**

**ಸೀತಾದೇವಿ ಅಮ್ಮನಿಗೆ ಪ್ರೀತಿಯ ಬಂಟನಾದ**

**ಮುಖ್ಯಪ್ರಾಣ ಹಯವದನನ ದೂತನೆ || 3 ||**

**17.** ಬಂದೇವಯ್ಯಾ ಗೋವಿಂದ ಶೆಟ್ಟಿ
ನಿಮ್ಮ ಹರಿವಾಣ ತೀರ್ಥ ಪ್ರಸಾದ
ಉಂಟೆನಲಾಗಿ ||ಪಲ್ಲವಿ||

ಅಪ್ಪವು ಅತಿರಸ ತುಪ್ಪವು ಬಿಸಿ ಹಾಲು
ಒಪ್ಪುವ ಸಕ್ಕರೆ ಯಾಲಕ್ಕಿಯು
ಅಪರೂಪವಾದ ಕಜ್ಜಾಯಗಳನೆಲ್ಲ
ಛಪ್ಪನ್ನ ದೇಶಕ್ಕೆ ಮಾರುವ ಶೆಟ್ಟಿ ||೧||

ಒಡೆದ ಮಡಕೆ ತಂದು ಅರೆದು ನಾಮವ ಮಾಡಿ
ಕೊಡುವೆ ನೀ ಕಾಸಿಗೆ ಒಂದೊಂದಾಗಿ
ಒಡಲು ತುಂಬಿ ಮಿಕ್ಕ ಅನ್ನವ ಮಾರಿಸಿ
ಒಡವೆಯ ಗಳಿಸುವ ಕಡುಲೋಭಿ ಶೆಟ್ಟಿ ||೨||

ಶೇಷಗಿರಿಯಲಿ ವಾಸವಾಗಿಹ ಶೆಟ್ಟಿ
ದೇಶದೇಶದೊಳು ಹೆಸರಾದ ಶೆಟ್ಟಿ
ಕಾಸು ಕಾಸಿಗೆ ಬಡ್ಡಿ ಗಳಿಸಿಕೊಂಬ
**ಆದಿಕೇಶವ** ನಾರಾಯಣ ತಿಮ್ಮ ಶೆಟ್ಟಿ ||೩||